ಅ) ಚಿಕ್ಕಬಳ್ಳಾಪುರ ತಾಲ್ಲೂಕಿಗೆ ಅವಶ್ಯಕತೆ ಇರುವ 55 ಹೆಚ್ಚುವರಿ ಅಂಗನವಾಡಿ ಕೇಂದ್ರಗಳ ಪ್ರಸ್ತಾವನೆಯನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದಿಂದ ಮಂಜೂರಾತಿ ದೊರೆತ ನಂತರ ಪ್ರಾರಂಭಿಸಲಾಗುವುದು.

ಚಿಕ್ಕಬಳ್ಳಾಪುರ ತಾಲ್ಲೂಕಿನ ರಂಗಧಾಮ ಕಾಲುವೆಯನ್ನು ಪೂರ್ಣಗೊಳಿಸುವುದು

663(840) ಶ್ರೀಮತಿ ಅನಸೂಯಮ್ಮ ನಟರಾಜನ್. ಕೆ.ವಿ. (ಚಿಕ್ಕಬಳ್ಳಾಪುರ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಬಳ್ಳಾಪುರ ತಾಲ್ಲೂಕಿನ ಅವಶ್ಯಕತೆಯಿರುವ ರಂಗಧಾಮ ಕಾಲುವೆ ನಿರ್ಮಾಣ ಹಂತದಲ್ಲಿಯೇ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಈ ಕಾಲುವೆ ಪೂರ್ಣ ಪ್ರಮಾಣದಲ್ಲಿ ನಿರ್ಮಾಣ ಗೊಂಡರೆ, ಈ ತಾಲ್ಲೂಕಿನ ಸುಮಾರು 10 ಕೆರೆಗಳಿಗೆ ಹಾಗೂ ಇದರ ಪೂರ್ವಕ್ಕಿರುವ ಅನೇಕ ಕೆರೆಗಳಿಗೆ ನೀರು ತುಂಬಿ ರೈತರಿಗೆ ಮಳೆಗಾಲ ಹಾಗೂ ಬೇಸಿಗೆ ಕಾಲದ ಬೆಳೆಗಳಿಗೆ ಅನುಕೂಲವಾಗುವುದರಿಂದ ಇದಕ್ಕಾಗಿ ಕೂಡಲೆ ಹಣವನ್ನು ಮಂಜೂರು ಮಾಡಿ ಕಾಲುವೆಯ ಕಾಮಗಾರಿಯನ್ನು ಪೂರ್ಣಗೊಲಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಬಂದಿದೆ.

ಆ) ಈ ಕಾಮಗಾರಿಯು ರೂ. 160.00 ಲಕ್ಷಕ್ಕೆ ಮಂಜೂರಾಗಿದ್ದು ಕಾಮಗಾರಿಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಆದರೆ 2001-02ನೇ ಸಾಲಿನ ಮಳೆಗಾಲದಲ್ಲಿ ಸರಪಳಿ. 800 ಮೀ.ನಲ್ಲಿ ಬಲದಂಡೆಯು ಮಳೆಹಾನಿಗೀಡಾಗಿ ಒಡೆದು ಹೋಗಿದ್ದು, ದುರಸ್ತಿ ಕಾಮಗಾರಿಯು ಈಗ ಹಾಲಿ ಪ್ರಗತಿಯಲ್ಲಿರುತ್ತದೆ.

ಭದ್ರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡಬಾತಿ ಈ ಕಾರ್ಖಾನೆ ಕಾರ್ಮಿಕರಿಗೆ ಮುಂಬಡ್ತಿ ನೀಡಿಕೆಯಲ್ಲಿ ಅನ್ಯಾಯ

664(832) ಶ್ರೀ ಎಸ್. ಅಂಗಾರ್ (ಸೂಳ್ಯ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡ ಬಾತಿ ಈ ಕಾರ್ಖಾನೆ ಪ್ರಾರಂಭವಾದಾಗಿನಿಂದ ಇದುವರೆಗೂ ಇಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಪೈಕಿ ಮುಂಬಡ್ತಿ ನೀಡಲಾದ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಈ ರೀತಿ ಮುಂಬಡ್ತಿ ಕೊಡುವಂತಹ ಸಂದರ್ಭದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕಾರ್ಮಿಕರ ಹಿತ ಕಾಪಾಡಲಾಗಿದೆಯೇ?

ಇ) ಇಲ್ಲವಾದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಹಾಗೂ ಇದುವರೆಗೂ ಮುಂಬಡ್ತಿ ಪಡೆದಿರುವ ಕಾರ್ಮಿಕರ ಸಂಖ್ಯೆ ಎಷ್ಟು (ಇವರ ಹೆಸರುಗಳು, ಕೆಲಸಕ್ಕೆ ಸೇರಿದ ದಿನಾಂಕ, ಖಾಯಂ ಆದ ದಿನಾಂಕ ಮುಂಬಡ್ತಿ ಪಡೆದ ದಿನಾಂಕ, ಹುದ್ದೆಗಳು ಇತ್ಯಾದಿ) ವಿವರಗಳನ್ನೊದಗಿಸುವುದು;